ಕಣ್ವನ ಸೆರಿಬ

&

ಜಲದುರ್ಗ-ಜಿಂಜಿರ ಮಯೂರಿ

ಕಮಲಬಿಂದು ಶ್ರೀಜಯ 8 ಬಿ ಕ್ಲಾಸ್ ೧೯೯೮

ಪ್ರೇಕ್ಷಣೀಯ ಸ್ಥಳ



ಸಾಗರಮಧ್ಯದ ಸುಭದ್ರ ಕೋಟೆ-ಜಂಜೀರ ಮುರೂಡ

ಕಣ್ಮನ ಸೆಳೆವ ಜಲದುರ್ಗ- ಜಂಜೀರ ಮುರೂಡ

ಹಿಂದೊಮ್ಮೆ ಭದ್ರತೆಯ ಕುರುಹಾಗಿದ್ದ ಕೋಟೆಗಳು ಇಂದು ಅವಶೇಷಗಳಾಗಿ, ಪ್ರೇಕ್ಷಣೀಯ ಸ್ಥಳಗಳಾಗಿ ಮಾರ್ಪಟ್ಟಿವೆ. ಕೋಟೆ ಅಥವಾ ದುರ್ಗಗಳಲ್ಲಿ ನೆಲದುರ್ಗ, ಜಲದುರ್ಗ, ಗಿರಿದುರ್ಗಗಳೆಂದು ಮೂರು ಮುಖ್ಯವಿಧ. ವನದುರ್ಗಗಳೂ ಇವೆಯೆಂದು ಕೇಳಿದ್ದೇನೆ, ಆದರೆ ಅವನ್ನು ನೋಡುವ ಭಾಗ್ಯ ನನಗೆ ಬಂದಿಲ್ಲ. ಇಂದು ಅವಶೇಷಗಳಾಗಿದ್ದರೂ ಅವನ್ನು ಕಾಣಬೇಕೆಂಬ, ಕಂಡು ಅಲ್ಲಿಯ ಕುತೂಹಲಕಾರಿ ಆಗುಹೋಗುಗಳನ್ನು ಅಲ್ಲಿಯೇ ನಿಂತು ಕಲ್ಪಿಸುವ ಜನರ ಸಂಖ್ಯೆ ಕಡಿಮೆಯೇನಿಲ್ಲ. ಅಹುದು, ಅಂಥ ಅವಶೇಷಗಳನ್ನು ನೋಡಲು ಹೋದಾಗ್ಗೆ ಅಲ್ಲಿ ಬಂದ ಪ್ರವಾಸಿಗರ ಆತುರ; ಹಿಂದೆ ಆಳಿಹೋದ ರಾಜರ, ಪಾಳೇಗಾರರ ಬಗ್ಗೆ ತಿಳಿಯುವ ಕಾತರವನ್ನು ಕಂಡು ಬೆರಗಾಗಿದ್ದೇನೆ.

ಪಶ್ಚಿಮ ಘಟ್ಟದ ಅರಬ್ಬೀ ಸಮುದ್ರದಲ್ಲಿರುವ 'ಜಂಜೀರ-ಮುರೂಡ' ಜಲದುರ್ಗವು ಬಹುಶಃ ಭಾರತದ ಅತ್ಯಂತ ಬಲಶಾಲಿ, ಸುಭದ್ರವಾದ ಜಲದುರ್ಗವೆಂದು ಹೇಳಬೇಕು.

ಮುಂಬೈಯಿಂದ ದಕ್ಷಿಣಕ್ಕೆ ಕೆಳಗೆ ೨೯೦ ಕಿ.ಮೀ. ಅಂತರದಲ್ಲಿದೆ ಪಶ್ಚಿಮ ಘಟ್ಟದ ತಾಲ್ಲೂಕಾ ಸ್ಥಳವಾಗಿರುವ ಮೂರೂಡ, ಹಿಂದಿನ ಕೊಲಾಬಾ ಇಂದಿನ 'ರಾಯಗಡ' ಜಿಲ್ಲೆಯಲ್ಲಿದೆ.

ಊರಿನ ಉತ್ತರಕ್ಕೆ ವಿಶಾಲವಾದ 'ಖಾಡಿ' (ಸಮುದ್ರದ ಒತ್ತು) ಇದೆ. ಈ ದುರ್ಗಕ್ಕೆ ಹೋಗಬೇಕಾದರೆ ಇದನ್ನು ದಾಟಬೇಕು. ಅದಕ್ಕೂ ಮುಂಚೆ ಒಂದು ದಿಬ್ಬವನ್ನು ಹತ್ತಿ ಇಳಿಯಬೇಕು. ಇದನ್ನು ದಾಟುತ್ತಲೇ "ಸಾವಿತ್ರಿ" ನದಿಯಿಂದ ನಿರ್ಮಿತವಾದ ವಿಶಾಲ ಖಾಡಿ ಸಿಕ್ಕುತ್ತದೆ. ಇದರ ಮಧ್ಯದಲ್ಲಿಯೇ ಅತ್ಯಂತ ಪ್ರಚಂಡವಾದ, ಭೂತಾಕಾರವಾದ ಆನೆಯ ರೂಪದ ಒಂದು ಭವ್ಯ ಕಪ್ಪುಶಿಲೆಯ ಕಟ್ಟಡ ಕಾಣುತ್ತದೆ. ಅದೇ ಈ ಜಲದುರ್ಗ. ಜಂಜೀರ ಮೂರೂಡ ಕಿಲ್ಲೆ!

ಇದನ್ನು ತಲುಪಲು ಇನ್ನು ಮುಂದಿನ ಪ್ರಯಾಣ ಜಲಮಾರ್ಗ. ದೋಣಿಯಲ್ಲಿ ಸಾಗಬೇಕು. ತೆರೆ ಅಪ್ಪಳಿಸುತ್ತಿರುತ್ತವೆ ಮಳೆಗಾಲ ಹಾಗೂ ಸಮುದ್ರದ ಭರತವಿದ್ದರೆ ಈ ತೆರೆಗಳ ಆರ್ಭಟ ಇನ್ನೂ ಹೆಚ್ಚು. ದೋಣಿಯಲ್ಲಿ ಹುಷಾರಾಗಿ ಪ್ರಯಾಣಿಸಬೇಕು. ಈ ಸಂದರ್ಭದಲ್ಲಿ ಸಮುದ್ರದ ನೀರು ಕಿಲ್ಲೆಯ ದ್ವಾರದ ಪಾವಟಿಗೆಯ ಪಾದ ತೊಳೆಯುತ್ತಿರುತ್ತದೆ.

ಕಿಲ್ಲೆಯ ಮಹಾದ್ವಾರವನ್ನು ದಾಟುತ್ತಲೇ ಇನ್ನೊಂದು ಒಳಬಾಗಿಲವನ್ನು ದಾಟಬೇಕು. ಅಲ್ಲಿ ಬಲಬದಿಗೆ ತಿರುಗಿದರೆ ಹಿಂದೆ ಯಾವ ಸರದಾರನಿದ್ದನೋ ಅವನು ಸ್ಥಾಪಿಸಿದ ರಾಮ ಪಂಚಾಯತವಿತ್ತು. ಈಗ ಅದರ ಮುಂದೆ 'ಸಿದ್ದಿ'ಯು ಪೀರ ಪಂಚಾಯತ ನಿರ್ಮಿಸಿದ್ದಾನೆ.

ಚಿತ್ರ-ಲೇಖನ:

✦ ಎಸ್.ಸಿ. ದೇಸಾಯಿ

ಮೊದಲು ಬಂದವರು

ಈ ಕೋಟೆಯಿದ್ದ ನಡುಗಡ್ಡೆಯ ಭಾಗಕ್ಕೆ 'ರಾಜಪುರಿ' ಎಂದೂ ಕರೆಯುವದುಂಟು ಕ್ರಿ.ಶ. ೧೫೯೦ರ ಕೊನೆಯ ಹಂತದಲ್ಲಿ ಈ ನಡುಗಡ್ಡೆಯ ಸುತ್ತ ಮೀನುಗಾರ ಜನಾಂಗದ ವಸ್ತಿಯೇ ಹೆಚ್ಚಾಗಿತ್ತು. ಇವರಿಗೆ 'ಕೋಳಿ' ಜನ ಎಂದು ಕರೆಯುತ್ತಾರೆ. ಈ ಜನಾಂಗಕ್ಕೆ ವಸತಿಯ ಸೌಕರ್ಯವಿರಲಿಲ್ಲ. ಅಲೆದಾಟದಲ್ಲಿಯೇ ಕಾಲಹರಣವಾಗುತ್ತಿತ್ತು, ಆಗ ಈ ಭಾಗವನ್ನು ಆಳುತ್ತಿದ್ದ ದೊರೆಗಳನ್ನು ಕಂಡು, ಈ ನಡುಗಡ್ಡೆಯ ಮೇಲೆ ವಾಸ್ತವ್ಯ ಹೂಡಲು ಅಪ್ಪಣೆ ಪಡೆದುಕೊಂಡರು. ಬಂದು ಇರುತ್ತಿದ್ದಂತೆಯೇ ಇವರ ಆರ್ಥಿಕ ಸ್ಥಿತಿಯೂ ಒಳ್ಳೆಯದಾಗುತ್ತಾ ನಡೆಯಿತು. 'ಸಕ್ಕರೆ ಇದ್ದಲ್ಲಿ ಇರುವೆ' ಎಂಬಂತೆ ಇವರ ಆರ್ಥಿಕ ಬಲ ಇವರಿಗೆ ಮುಳುವೇ ಆಯಿತು. ಸಮುದ್ರಗಳ್ಳರ ಕಣ್ಣು ಇವರ ಮೇಲೆ ಬಿತ್ತು. ಕಿರುಕುಳ ಪ್ರಾರಂಭವಾಯಿತು. ವಾಸ್ತವ್ಯಕ್ಕೆ ಜಾಗೆಯಿಲ್ಲದೇ ಒದ್ದಾಡಿ ಈಗಿಷ್ಟು ಶಾಂತಜೀವನ ಸಾಗಿಸಬೇಕೆಂದರೆ ಈ ಕಾಟ.

ತಾವಿದ್ದ ತಾಣವನ್ನು ಭದ್ರಪಡಿಸಿಕೊಳ್ಳುವುದು ಅನಿವಾರ್ಯವಾಯಿತು. ಈ ಸಮಯದಲ್ಲಿ ಈ ಕೋಳಿ ಜನರ ಮುಖ್ಯಸ್ಥನಾದ 'ರಾಮ ಪಾಟೀಲ' ಎಂಬುವನೊಡನೆ ಜನರು ವಿಚಾರ ವಿನಿಮಯ ಮಾಡಿಕೊಂಡು ತಮ್ಮ ಭದ್ರತೆಗಾಗಿ 'ಕಟ್ಟಿಗೆ ಕೋಟೆ'ಯನ್ನು ನಿರ್ಮಿಸಿಕೊಂಡರು.

ರಾಮಪಾಟೀಲನ ನಂತರ ಆ ಸ್ಥಾನಕ್ಕೆ ಬಂದವನು "ಐತಬಾರ ರಾವ್" ಎಂಬ ಕೋಳಿ. ಅವನು ಬಲಿಷ್ಠನೂ ಹೌದು. ಧೈರ್ಯಶಾಲಿಯೂ ಅಹುದು. ಯಾರಿಗೂ ಮಣಿಯದ ವ್ಯಕ್ತಿಯಾಗಿ ಮೆರೆಯತೊಡಗಿದ್ದ.


'ಅಹಮದ ನಗರ'ದ ಮಾಲಿಕ ಅಹಮದ್ ಸುಬೇದಾರನು, ಈ ಕೋಟೆಯ ಭದ್ರತೆ ಇರುವ

ಪ್ರೇಕ್ಷಣೀಯ ಸ್ಥಳ

ಸ್ಥಾನ, ಅಲ್ಲಿಯ ವಾತಾವರಣ ಎಲ್ಲವನ್ನು ಅವಲೋಕಿಸಿದ್ದ. ಈ ಕೋಟೆಯ ಮೇಲೆ ಅವನು ಕಣ್ಣು ಬಿತ್ತು. ಕ್ರಿ.ಶ. ೧೪೮೫-೮೭ರಲ್ಲಿ ಈ ಕೋಟೆಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಯುದ್ಧ ಸನ್ನದ್ಧನಾಗಿ ಬಂದರೂ ಅವನಿಗೆ ಕೋಟೆಯನ್ನು ವಶಕ್ಕೆ ತೆಗೆದುಕೊಳ್ಳುವುದು

ಕ್ರಿ.ಶ. ೧೪೯೦ರಲ್ಲಿಯ ಒಂದು ಸಾಯಂಕಾಲ ಈ ಕಟ್ಟಿಗೆಯ ಕೋಟೆಯ ಕೋಳಿಯ ಜನ, ಆಟಪಾಟ-ಮನರಂಜನೆಯಲ್ಲಿ ತೊಡಗಿದ್ದಾರೆ. ಸಂತೋಷದ ವಾತಾವರಣ ಎಲ್ಲೆಡೆಯೂ ತುಂಬಿದೆ. ದಣಿದ ಮಕ್ಕಳೆಲ್ಲ ಮನೆಗೆ ಮರಳಿದ್ದಾರೆ. ಉಳಿದ ಹಿರಿಯರು ಏತಬಾರ್ ರಾವ್‌ನೊಂದಿಗೆ ಹರಟೆಯಲ್ಲಿ ತೊಡಗಿದ್ದಾರೆ. ವಿನೋದ ಹಾಸ್ಯದಲ್ಲಿ ಕಾಲ ಸರಿಯುತ್ತಿದೆ. ನಂಬಿಗಸ್ಥರ ಸಹವಾಸ,

ಬಂದ ಅತಿಥಿ 'ನಾವು ವ್ಯಾಪಾರಿಗಳು, ಸರಕು ಸಮೇತ ಹೊರಟಿದ್ದೇವೆ. ಯಾಕೋ ಇಂದು ನಮ್ಮ ಜನವೆಲ್ಲ ರಾತ್ರಿ ಪ್ರವಾಸ ಮುಂದುವರೆಸಲು ಹಿಂಜರಿಯುತ್ತಿದ್ದಾರೆ. ಇಂಥ ಸಂದರ್ಭದಲ್ಲಿಯೇ ನಿಮ್ಮ ಸ್ಥಳವೂ ಕಂಡಿತು. ನೀವು ಅಪ್ಪಣೆ ಕೊಟ್ಟರೆ ಇದೊಂದು ರಾತ್ರಿಯನ್ನು ನಿಮ್ಮಲ್ಲಿ ಕಳೆದು ಬೆಳಿಗ್ಗೆ ನಾವು ನಮ್ಮ ಪ್ರಯಾಣವನ್ನು ಮುಂದುವರೆಸುವೆವು' ಎಂದು ಬೇಡಿಕೊಂಡ.



ಅಂದಿನ 'ರಾಮ ಪಂಚಾಯ' ನಂತರ 'ಪೀರ ಪಂಚಾಯ'

ಸಾಧ್ಯವಾಗಲಿಲ್ಲ.

ಅದೆಷ್ಟೋ ರಾಜ-ಸುಬೇದಾರರಿಗೂ ಈ ನಡುಗಡ್ಡೆಯ ಭದ್ರವಾದ ಸ್ಥಳದ ಮೇಲೆ ಕಣ್ಣು. ಅಂತಹ ಇನ್ನೂ ಕೆಲವರು ಈ ಸ್ಥಳವನ್ನು ಕಿತ್ತುಕೊಳ್ಳಬೇಕೆಂದು ಪ್ರಯತ್ನಿಸಿದರು. ಆದರೆ 'ಏತಬಾರ ರಾವ್'ನ ದೈವ ಚೆನ್ನಾಗಿಯೇ ಇತ್ತು. ಜಯದ ಮಾಲೆ ಯಾವಾಗಲೂ ಇವನ ಕೊರಳನ್ನೇ ಅಲಂಕರಿಸಿತು. ಇವನು ಶೂರನಿದ್ದಂತೆ ಕರುಣಾಳೂ ಆಗಿದ್ದ. ಅದೇ ಅವನಿಗೆ ಮುಳುವಾಯಿತೋ ಏನೋ.

ಔದಾರ್ಯವೇ ಉರುಳಾಯಿತು

ಅಭಯದ ಕಾಲ, ನೆಮ್ಮದಿಯ ವಾತಾವರಣ ನಿರ್ಮಿಸದಿದ್ದೀತೆ.

ಅಂದಿನ ಆ ಸುಮಧುರ ಸಂಜೆಯಲ್ಲಿ ತಲ್ಲೀನನಾಗಿದ್ದಾಗ ಕಾವಲುಗಾರನೊಬ್ಬ ಒಳಬಂದು, 'ದೊರೆಯೇ ನಿಮ್ಮನ್ನು ಕಾಣಲು ಯಾರೋ ಬಂದಿದ್ದಾರೆ' ಎಂದು ಹೇಳಿದ.

ದಯಾಳು ದೊರೆ ಯಾರ ದರ್ಶನವನ್ನು ನಿರಾಕರಿಸುವವನಲ್ಲ-ಬರ ಹೇಳುತ್ತಾನೆ. ಆಗಂತುಕ ಬಂದು, ದೊರೆಗೆ ನೆಲಮುಟ್ಟಿ ನಮಸ್ಕರಿಸುವನು. ಅವನನ್ನು ಆದರದಿಂದಲೇ ಬರಮಾಡಿಕೊಂಡ ದೊರೆ, 'ಏನು ವಿಷಯ' ಎಂದು ಕೇಳಿದ.

ದೊರೆ ದಯಾಳು ಅಲ್ಲವೆ? ಅವರ ಬೇಡಿಕೆಯನ್ನು ನಿರಾಕರಿಸಲಿಲ್ಲ. ಬಂದ ಅತಿಥಿಗಳಿಗೆ ಯೋಗ್ಯ ಮನ್ನಣೆ ನೀಡಿ ಸರಬರಾಜೂ ನಡೆಯಿತು. ರಾತ್ರಿ ಇರಲು ಅಪ್ಪಣೆ ದೊರೆಯಿತು. ಸೌಕರ್ಯಗಳೂ ಒದಗಿಬಂದವು. ಈ ಸಂದರ್ಭದಲ್ಲಿ ಬಂದ ಅತಿಥಿ, 'ನಿಮ್ಮ ಔದಾರ್ಯಕ್ಕೆ ನಾವು ಉಪಕೃತರು, ನೀವು ಉತ್ತಮ ಭೋಜನ ನೀಡುತ್ತಿದ್ದೀರಿ, ನಮ್ಮೊಡನೆ ಉ[illegible] ಮದ್ಯವಿದೆ. ನಿಮ್ಮ ಅಪ್ಪಣೆಯಾ[illegible] ನಾವೆಲ್ಲ ಸೇರಿಯೇ ಸೇವಿಸೋ[illegible] ಅದಕ್ಕೆ ದೊರೆ ಸಮ್ಮತಿ[illegible]

ಪ್ರೇಕ್ಷಣೀಯ ಸ್ಥಳ

ಬಂದಿದ್ದ ಆಗಂತುಕ ವ್ಯಾಪಾರಿಯೇ ಅಲ್ಲ! 'ಪರೀಮಖಾನ್' ಎಂಬ ಸರದಾರ... ಸರಿ, ಮದ್ಯಸೇವನೆಗೆ ಪ್ರಾರಂಭವಾಯಿತು.

ಪ್ರಾರಂಭದಲ್ಲಿ ಮದ್ಯವನ್ನು ಮನುಷ್ಯ ಕುಡಿಯುತ್ತಾನೆ ನಂತರ ಮದ್ಯವೇ ಮನುಷ್ಯನನ್ನು ಕುಡಿಯುತ್ತದೆ. ಇಲ್ಲಿ ಆದುದೂ ಹಾಗೆಯೇ.

ನಾವೆಗಳಿಂದ ಸರಾಯಿ ಹೊತ್ತು ತಂದ ಸಿದ್ದಿಗಳೂ ಕೂಡಾ ಕುಡಿದು ಮತ್ತರಾದರು. ಒಳಗಿದ್ದ ಏತಬಾರ ರಾವನ ಜನ ಎಚ್ಚರ ತಪ್ಪಿಬಿದ್ದರು. ಇದೇ ಸಂದರ್ಭವನ್ನು ಕಾಯುತ್ತಿದ್ದ ಪರೀಮಖಾನನ ಜನ, ಭುಗಿಲೆದ್ದು ಕೋಟೆಯೊಳಗಿನ ಮತ್ತರಾದ ಜನರನ್ನು ಕರುಣೆಯಿಲ್ಲದೇ ತುಂಡರಿಸತೊಡಗಿದರು. ಕುಡಿಯದಿದ್ದ ಮಕ್ಕಳು, ಮಹಿಳೆಯರು ರೋದಿಸಿದರು. ಆದರೆ, ಅದು ಅರಣ್ಯರೋದನವಾಗಿತ್ತು.

ಕೇಳಲೂ ಯಾರು ಉಳಿದಿರಲಿಲ್ಲ, ನಾವೆಯಲ್ಲಿ ಒಂದು ಸೈನ್ಯದ ತುಕಡಿಯೇ ಬಂದಿತ್ತು. ಸರಕು ಎಂದು ಹೇಳಿದ ಪಿಪಾಯಿಗಳಲ್ಲಿ ಸೈನಿಕರೇ ತುಂಬಿದ್ದರು; ಒಳಜನ ಮತ್ತರಾದಾಗಲೇ ಅವರೆಲ್ಲ ಆಯುಧಗಳೊಂದಿಗೆ ಕೋಟೆಯನ್ನು ಸೇರಿದ್ದರು. ಕೋಟೆ ಪರೀಮಖಾನನ ವಶವಾಯಿತು. ಬಾದಶಹಾನ ಪತಾಕೆ ಹಾರಾಡಿತು.

ಪರೀಮಖಾನನ ನಂತರ ಅವನ ಸ್ಥಾನಕ್ಕೆ ಬಂದವನು "ಬುರ್‍ಹಾಣಖಾನ" ಎಂಬುವನು. ಇವನು ಮೂಲತಃ ಅಬಿಸೀನಿಯಾದವನು. ಗಟ್ಟಿಗನಿದ್ದಂತೆ ಬುದ್ಧಿವಂತನೂ ಆಗಿದ್ದ. ಅವನೇ ಇಲ್ಲಿ ಒಂದು ಭದ್ರವಾದ ಕೋಟೆಯ ನಿರ್ಮಾಣದ ಯೋಜನೆ ಮಾಡಿದವನು. ಆ ಕಾರ್ಯಕ್ಕೆ ಬಾದಶಹಾನ ಅಪ್ಪಣೆ ಪಡೆದು, ಕ್ರಿ.ಶ. ೧೫೬೭ ಮತ್ತು ಕ್ರಿ.ಶ. ೧೫೭೧ರ ಮಧ್ಯೆ ಈ ಪ್ರಸಿದ್ಧ ಜಲದುರ್ಗವನ್ನು ನಿರ್ಮಿಸಿದನು.

ಕಪ್ಪುಕಲ್ಲಿನಲ್ಲಿ ನಿರ್ಮಿಸಿದ ಈ ಕೋಟೆಯಲ್ಲಿ ೧೯ ಬುರುಜುಗಳಿವೆ. .ದೇಶವಿದೇಶಗಳಿಂದ ತರಿಸಿದ ೫೦೦ಕ್ಕೂ ಹೆಚ್ಚು ತೋಪುಗಳ ಸಂಗ್ರಹ ಇಲ್ಲಿತ್ತು. ಶತಮಾನಗಳು ಕಳೆದರೂ ಕಲ್ಲುಗಳನ್ನು ಹೊಂದಿಸಲು ಉಪಯೋಗಿಸಿದ ಗಚ್ಚು(ಗಾರೆ) ಕೂಡ ಶಿಥಿಲವಾಗಿಲ್ಲ. ಅಂಥ ಭದ್ರನಿರ್ಮಾಣವಿದು.

ಜಂಜೀರಾ ಮೇಹರೂಬ

"ಜಂಜೀರಾ" ಅಂದರೆ ಸಣ್ಣನಡುಗಡ್ಡೆ 'ಮೆಹರೂಬ' ಅಂದರೆ ಅರ್ಧಚಂದ್ರ. ಮುಸ್ಲಿಮರು ಈ ದುರ್ಗವನ್ನು ಕರೆದ ರೀತಿ ಇದು. ಅದುವೇ ಮುಂದೆ ವ್ಯವಹಾರದಲ್ಲಿ, ಕೋಳಿ ಭಾಷೆಯಲ್ಲಿ ಜಂಜೀರಾ-ಮುರೂಡ ಆಯಿತು.

ಆಮೇಲೆ ಒಂದೂ ಮುಕ್ಕಾಲು ಶತಮಾನ ಕಾಲ ಉರುಳಿಹೋಯಿತು. ಕ್ರಿ.ಶ. ೧೬೭೯ರ ಸಮಯ. ಈಗಲು ಅಹಮದನಗರದ ನಿಜಾಮಶಾಹಿ ಮನೆತನದವರದೇ ಅಧಿಕಾರ. ಈ ಸಿದ್ದಿಗಳನ್ನೆ ಅವರು ಪಾಳೇಗಾರರನ್ನಾಗಿ ಮುಂದುವರೆಸಿದ್ದರು. ನಿಜಾಮಶಾಹಿಯಿಂದ ವಿಜಾಪುರದ ಆದಿಲಶಾಹಿಯರ ಕಡೆಗೆ ಈ ಜಲದುರ್ಗದ ಆಡಳಿತ ಬದಲಾದರೂ ಈ ಸಿದ್ದಿಗಳು ಒಂದು ರೀತಿಯಲ್ಲಿ ಸ್ವತಂತ್ರರಿದ್ದಂತೆಯೇ ಇದ್ದರು.


ಈ ಸಮಯದಲ್ಲಿ 'ಫತ್ತೇಖಾನ್' ಎಂಬುವನು ಇಲ್ಲಿಯ 'ಸಿದ್ದಿ'ಯರ ಮುಖ್ಯಸ್ಥನಾಗಿದ್ದನು. ಅವನ ಅನುಯಾಯಿಗಳಾಗಿದ್ದವರು ಮೂವರು. ಸಿದ್ದಿ ಸುಬೂಲ್, ಸಿದ್ದಿ ಕಾಸೀಮ ಮತ್ತು ಸಿದ್ದಿ ಖೈರ್ಯತ್. ಇವರು ಅತ್ಯಂತ ಶೂರರಾಗಿದ್ದರು. ಅಷ್ಟೇ ಕ್ರೂರರೂ ಇದ್ದರು. ಹಾಗೆಯೆ ಹಿಂದು ಮತ್ತು ಮರಾಠಿಗರ ದ್ವೇಷಿಗಳು ಆಗಿದ್ದರು.

ಶಿವಾಜಿಯ ದಾಹ

ಭದ್ರವಾದ ಈ ಕೋಟೆ, ಸುಂದರವಾದ ಆಕರ್ಷಣೀಯ ಜಲದುರ್ಗ, ಸಹಜವಾಗಿಯೇ 'ದುರ್ಗಪ್ರೇಮಿ' ಶಿವಾಜಿ ಛತ್ರಪತಿಯ ಮನವನ್ನು ಸೆಳೆದಿದ್ದರೆ ಏನಾಶ್ಚರ್ಯ? ಯಾವ ಪರಿಸ್ಥಿತಿಯಲ್ಲಾದರೂ ಈ 'ಜಂಜೀರ-ಜಲದುರ್ಗ'ವನ್ನು ವಶಮಾಡಿಕೊಳ್ಳಬೇಕೆಂಬುದು ಶಿವಾಜಿಯ ದಾಹ. ಪರಿಣಾಮ ೧೪ನೇ ಆಗಸ್ಟ್ ೧೬೫೭ ರಂದು ಮಹಾರಾಜರು ರಘುನಾಥ ಬಲ್ಲಾಳ ಸಬನೀಸ ಎಂಬ ಸೇನಾನಿಯನ್ನು ಈ ಕಾರ್ಯಕ್ಕಾಗಿ ನಿಯಮಿಸಿದರು.

ಶೂರ ಹಾಗೂ ಸ್ವಾಮಿನಿಷ್ಠ ರಘುನಾಥ ಜೀವದ ಹಂಗುದೊರೆದು ಪರಾಕ್ರಮದಿಂದ ಕಾದಾಡಿದರೂ ದುರ್ಗ ಅವನ ಕೈ ಸೇರಲಿಲ್ಲ. ಜಯ ಮಾಲೆ ದೂರವೇ ಉಳಿಯಿತು.

ಜಯ ದೊರೆಯಲಿಲ್ಲವೆಂದು ನಿರಾಶರಾಗದ ಛತ್ರಪತಿ ಪ್ರಯತ್ನವನ್ನು ಅಲ್ಲಿಗೇ ಕೈಬಿಡಲಿಲ್ಲ. ಕೆಲ ರಾಜಕಾರಣಗಳು ಅಡ್ಡಿಯನ್ನು ತಂದೊಡ್ಡಿದರೂ ಯಾವ ಜಯವೂ ಅವರಿಗೆ ಕಾಣಲಿಲ್ಲ. ಹೀಗೆಂದು ಈ ಕಾರ್ಯವನ್ನು ಬಿಡಲಿಲ್ಲ! ಮನದಲ್ಲಿಯೇ ಇಟ್ಟುಕೊಂಡರು.



ಸಮುದ್ರದ ನಡುವೆ ಇರುವ ದುರ್ಗದಲ್ಲಿ ಸಿಹಿ ನೀರಿನ ಬಾವಿ!

ಪ್ರೇಕ್ಷಣೀಯ ಸ್ಥಳ

ಕ್ರಿ.ಶ. ೧೬೬೯ನೇ ಮೇ ತಿಂಗಳ ಒಂದುದಿನ ದುರ್ಗದ ದಾಹ ಮತ್ತೆ ಮರುಕಳಿಸಿತು. ಛತ್ರಪತಿಗಳು ತಾವೇ ಸ್ವತಃ ಸೈನ್ಯದ ಮುಂದಾಳತ್ವ ವಹಿಸಿ ಸೈನ್ಯದೊಂದಿಗೆ ಬಂದು 'ಮಹಾಡ' ಬಳಿ ಬಿಡಾರಬಿಟ್ಟರು. ಸುತ್ತೆಲ್ಲ ಯುದ್ಧದ ವಾತಾವರಣದ ಕಾರ್ಮೋಡ ಕವಿದಿದೆ, ಯುದ್ಧ ಚೇತನ ಪಸರಿಸುತ್ತಿದೆ.

ಸೈನ್ಯ ತುಂಬಿದ ನೌಕೆಗಳು 'ಜಂಜೀರ' ಕೋಟೆಯ ನಾಲ್ಕೂ ನಿಟ್ಟಿನಲ್ಲೂ ಮುತ್ತಿವೆ, ಎಲ್ಲ ದಿಕ್ಕಿನಿಂದಲೂ ನೌಕೆಯ ತೋಪುಗಳು ಗುಂಡಿನ ಮಳೆಗರೆಯುತ್ತಲಿವೆ. ಗರ್ಜನೆ ಗಗನಕ್ಕೇರಿದೆ, ಸುತ್ತಲ ಹಳ್ಳಿಯ ಜನತೆ ಹೌಹಾರಿದ್ದಾರೆ. 'ಹರಹರ ಮಹಾದೇವ' ಕೂಗು ಸಮುದ್ರದ ತೆರೆಗಳನ್ನೇ ಅಪ್ಪಳಿಸುತ್ತಿದೆ. ಕೋಟೆಯ ಹೊರಗೆ ಈ ಭಯಂಕರ ವಾತಾವರಣವಿದ್ದಾಗ ಕೋಟೆಯೊಳಗಿನ ಸನ್ನಿವೇಶವೇ ಬೇರೆಯಾಗಿದೆ.

ಈ ಹಿಂದೆ ಮರಾಠಾ ಸೈನ್ಯದಿಂದ ತಪ್ಪಿಸಿಕೊಂಡಂತೆ ಈ ಸಲ ಹಾಗೆ ಪಾರಾಗಲು ಸಾಧ್ಯವೆ? . ಎಂಬ ಅನುಮಾನ ಕೋಟೆಯ ಒಳಗಿದ್ದ ಸಿದ್ದಿಯರ ಮನದಲ್ಲಿ ಸುಳಿದಿದೆ, ಅಧೈರ್ಯ ತಲೆದೋರುತ್ತಲಿದೆ. ಇನ್ನು ಹೊರಗಿನ ಸಹಾಯ ಬಾರದೇ ಮರಾಠಾ ಸೈನ್ಯವನ್ನು ಎದುರಿಸಲು ಸಾಧ್ಯವಿಲ್ಲವೆಂದಾಗ ಸಿದ್ದಿಗಳಿಗೆ ಹೊಳೆದ ಒಂದೇ ಒಂದು ಉಪಾಯವೆಂದರೆ ಇನ್ನು ಮುಂಬೈಯಲ್ಲಿದ್ದ ಆಂಗ್ಲರ ಸಹಾಯ ಕೋರಬೇಕೆಂಬುದು.

ಆದರೆ ಅವರನ್ನು ಸಂಪರ್ಕಿಸುವುದು ಅಷ್ಟು ಸುಲಭವಾಗಿರಲಿಲ್ಲ. ಮರಾಠರ ಕಣ್ಣುತಪ್ಪಿಸಿಯೇ ಆ ಕೆಲಸ ಮಾಡಬೇಕಿತ್ತು. ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೇ ೯ ಜೂನ್ ೧೬೬೯ರಂದು ಸಿದ್ದಿಯು ಮುಂಬೈಯಲ್ಲಿಯ ಆಂಗ್ಲರಿಗೆ ಸಹಾಯ ಕೋರಿ ಕಾಗದ ಕಳಿಸಿದನು.

ಮುಂಬೈಯಲ್ಲಿದ್ದ ಆಂಗ್ಲ ಅಧಿಕಾರಿಗೆ ಸಹಾಯ ಮಾಡಬೇಕೆಂಬ ಇಚ್ಛೆಯಿದ್ದರೂ ಆ ನಿರ್ಣಯವನ್ನು ಅವನೇ ತೀರ್ಮಾನಿಸುವಂತಿರಲಿಲ್ಲ. ಸುರತ್‌ದಲ್ಲಿದ್ದ ಅಧಿಕಾರಿಯ ಸಮ್ಮತಿ ಬೇಕಿತ್ತು. ಈ ವರಿಷ್ಠ ಅಧಿಕಾರಿ 'ನಮ್ಮ ರಕ್ಷಣೆಯೇ ನಮಗೆ ಭಾರವಾಗಿರುವಾಗ ಮತ್ತೊಬ್ಬರ ಸಹಾಯಕ್ಕೆ ಹೋಗುವುದು ಹೇಗೆ ಸಾಧ್ಯ' ಎಂದು ಬೇಡಿಕೆಯನ್ನು ಈಡೇರಿಸಲಿಲ್ಲ. (ಆಗ, ಮರಾಠರ ವೈರತ್ವವನ್ನು ಕಟ್ಟಿಕೊಳ್ಳುವುದು ಆಂಗ್ಲರಿಗೆ ಬೇಡವಾಗಿದ್ದೇ ಅದರ ಹಿನ್ನೆಲೆಯಾಗಿತ್ತು).

ಮೊಘಲರಲ್ಲಿ ಯಾಚನೆ

ಆಂಗ್ಲರ ಸಹಾಯ ದೊರೆಯಲಾರದೆಂದು ತಿಳಿದೊಡನೆ ಫತ್ತೇಖಾನ್ ಸಿದ್ದಿಯು ಹೌಹಾರಿದ, ಬುದ್ಧಿಯೇ ಮಂದವಾದಂತಾಯಿತು. ಕೋಟೆಯ ತುಂಬೆಲ್ಲ ಭಯಾನಕ ವಾತಾವರಣ. ಸೈನಿಕರ ಮುಖ ಕಳೆಗುಂದಿವೆ. ನೂರಾರು ತೋಪುಗಳಿದ್ದರೂ ನಿಶ್ಶಬ್ದವಾಗಿವೆ. ಅತ್ಯಂತ ಪ್ರಬಲವಾದ ಅವನ ತೋಪು 'ಕಲಾಲ ಬಾಂಗಡಿ' ಕೂಡ ಕಳೆಮುಖ ಮಾಡಿತ್ತು.



ಜಲದುರ್ಗದಲ್ಲೊಂದು ಬಲವಾದ ತೋಪು

ಫತ್ತೇಖಾನನು ಕೋಟೆಯ ಕಿಂಡಿಯಿಂದ ಹೊರನೋಡಲು ಹಿಂಜರಿಯುತ್ತಿದ್ದನು. ಹೊರದೃಶ್ಯ ಅಷ್ಟು ಭಯಂಕರವಾಗಿತ್ತು. ಮರಾಠರ ಉತ್ಸಾಹ, ಅವರ ದೃಢನಂಬಿಕೆ ಅವರ ಮುಖಗಳಿಂದಲೇ ಎದ್ದು ಕಾಣುತ್ತಿದ್ದವು. ಫತ್ತೇಖಾನನ ಕಣ್ಣೆದುರು ಈ ದೃಶ್ಯಗಳು ಬಂದೊಡನೆಯೆ ಅವನ ಜಂಘಾಬಲವೇ ಕುಗ್ಗಿಹೋಗುತ್ತಿತ್ತು.

ಉಪಾಯ ಕಾಣದ ಅವನು 'ಮೊಘಲರಿಂದ ಶಿವಾಜಿಗೆ ಸೈನ್ಯವನ್ನು ಹಿಂದೆ ತೆಗೆದುಕೊಳ್ಳಲು ಹೇಳಿಸಲು' ವಿಚಾರ ಮಾಡಿದ. ಈ ಕೇಳಿಕೆಯ ಪತ್ರವನ್ನು ಸಿದ್ದಿಯು ಮೊಘಲರಿಗೆ ಹೇಗೆ ತಲುಪಿಸಿದನೋ ತಿಳಿಯದು. ಶಿವಾಜಿಗೆ ಮೊಘಲರ ಆದೇಶವೂ ಬಂತು. ಆದರೆ, ಶಿವಾಜಿ ಅದನ್ನು ಮನ್ನಿಸಲಿಲ್ಲ. ಈ ಯೋಜನೆಯೂ ಸಫಲವಾಗದ್ದರಿಂದ ಫತ್ತೇಖಾನನು ಸಾಕಷ್ಟು ನಿರಾಶೆ ಹೊಂದಿದ. ಖಿನ್ನನಾದ ಫತ್ತೇಖಾನನು, ಕಲ್ಯಾಣದಲ್ಲಿದ್ದ ಮೊಘಲ್ ಸರದಾರ ಲೋದಿಖಾನನಿಗೇ ಈ ಕೋಟೆಯನ್ನು ಕೊಟ್ಟುಬಿಡುವಾ ಎಂಬ ವಿಚಾರವನ್ನೂ ಮಾಡುತ್ತಾನೆ. ಆದರೆ ಅದನ್ನು ಕಾರ್ಯರೂಪಕ್ಕೆ ತರಲು ಸದ್ಯಕ್ಕೆ ಅಶಕ್ಯವಾಗಿತ್ತು.

ಕೋಟೆಯ ಸುತ್ತಲೂ ಇದ್ದ ಮರಾಠಿಗರ ಕಣ್ಣು ತಪ್ಪಿಸುವುದು ಹೇಗೆ?

ಈ ಸಮಯದಲ್ಲಿ ಛತ್ರಪತಿಯ ವಾಸ್ತವ್ಯ 'ಪೇಣ' ಎಂಬಲ್ಲಿ ಇತ್ತು. ಜೊತೆಯಲ್ಲಿ ಮೋರೋ ಪಂತರೂ ಇದ್ದರು. ಇವರಿಗೆ ಕೋಟೆಯ ಒಳಗೆ-ಹೊರಗೆ ನಡೆಯುತ್ತಿರುವ ಚಟುವಟಿಕೆಗಳ ಅರಿವು ಚೆನ್ನಾಗಿ ಆಗಿತ್ತು. ಫತ್ತೇಖಾನ್ ಹಣ್ಣಾಗಿದ್ದಾನೆಂದು ತಿಳಿಯಿತು.

ಈ ಸಂದರ್ಭದಲ್ಲಿ ಶಿವಾಜಿಯು 'ಜಂಜೀರ ಕೋಟೆಯನ್ನು ನಮಗೆ ಬಿಟ್ಟುಕೊಡು. ಅದರ ಬದಲಾಗಿ ನಿಮಗೆ ನಮ್ಮ ರಾಜ್ಯದಲ್ಲಿ ಜಹಾಗೀರು ಕೊಟ್ಟು ಮನ್ನಿಸುವದಲ್ಲದೆ ನಿಮ್ಮ ಹಾನಿಯನ್ನೆಲ್ಲ ನಾವೇ ತುಂಬಿಕೊಡುತ್ತೇವೆ. ಸ್ನೇಹಿತರಾಗಿ ಬಾಳೋಣ' ಎಂಬ ಸಂದೇಶವನ್ನು ಸಿದ್ದಿಗೆ ಕಳಿಸಿದರು.

ಅತ್ಯಂತ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದ ಫತ್ತೇಖಾನನಿಗೆ 'ಇದೇ ಯೋಗ್ಯ' ಎಂದೆನಿಸಿತೋ ಏನೋ, ಶಿವಾಜಿ ಮಹಾರಾಜರಿಗೆ ಈ ಜಲದುರ್ಗವನ್ನು ಒಪ್ಪಿಸಲು ಸಿದ್ಧನಾದನು. ಇನ್ನೇನು, ಭಗವಾ ಝುಂಡಾ ಕೋಟೆಯ ಮೇಲೆ ಹಾರಬೇಕು ಎನ್ನುವ ಸಮಯ ಫತ್ತೇಖಾನನೇ 'ಕೈದಿ'ಯಾಗುತ್ತಾನೆ! ಶಿವಾಜಿಯಿಂದಲ್ಲ; ತನ್ನವರಿಂದಲೆ!

ಫತ್ತೇಖಾನನ ಅನುಯಾಯಿಗಳಾಗಿದ್ದ ಸಿದ್ದಿ ಸಂಬೂಲ, ಸಿದ್ದಿ ಕಾಸೀಮ ಹಾಗೂ ಸಿದ್ದಿ ಖೈರ್ಯತ್‌ರೇ ಇವನನ್ನು ಅಧಿಕಾರದಿಂದ ದೂಡುತ್ತಾರೆ.

ಈ ಮೂವರು ಕಟ್ಟಾ ಇಸ್ಲಾಮ ಧರ್ಮದ ಪಾಲಕರು ಫತ್ತೇಖಾನ ಶರಣಾಗತನಾಗುವದು ಇವರಿಗೆ ಎಷ್ಟೂ ಸೇರಿರಲಿಲ್ಲ. ಹೀಗೆಂದು ಒಟ್ಟಾಗಿ ಅವನನ್ನು ಸೆರೆಯಲ್ಲಿಟ್ಟು, ಏನೇ ತೊಂದರೆ ಬಂದರೂ ಮರಾಠರನ್ನು ಎದುರಿಸುವುದೆಂದು ನಿಶ್ಚಯಿಸಿದರು. ಮುತ್ತಿಗೆಯೂ

ಮುಂದುವರೆಯಿತು.

ಈ ಸಂದರ್ಭದಲ್ಲಿ ದುರ್ಗವು ವಿಜಾಪುರದವರ ಅಧೀನದಲ್ಲಿಯೇ ಇತ್ತು, ಈಗ ಸಂಬೂಲನು ದುರ್ಗದ ಮುಖ್ಯಸ್ಥನಾಗಿದ್ದ ಕಾಶೀಮನು ಕಿಲ್ಲೇದಾರ, ಖೈರ್ಯತ್ ಖಾನನು ದಂಡೆಯ ಪಾರುಪತ್ತೇಗಾರನಾಗಿದ್ದ. ಈ ಬದಲಾವಣೆಯಲ್ಲೇ ಕಾರ್ಯ ಮುನ್ನಡೆದಿತ್ತು.

ಇವರಿಗೂ ಗೊತ್ತು, ಹೊರಗಿನ ಸಹಾಯವಿಲ್ಲದೇ ಮುಂದೆ ಬದುಕುವುದು ಕಷ್ಟವೆಂದು. ಆಗ ಇವರು ಮೊಘಲರ ಮೊರೆಹೋದರು. ಇವರ ಮನವಿಯನ್ನು ಒಪ್ಪಿ ಔರಂಗಜೇಬನು ಇವರನ್ನು ತನ್ನ ಅಧೀನದಲ್ಲಿ ತೆಗೆದುಕೊಂಡು ಸಹಾಯ ಸಲ್ಲಿಸುತ್ತಾನೆ ಪರಿಣಾಮವಾಗಿ ಮರಾಠ ಸೈನ್ಯ ಅಲ್ಲಿಂದ ಹಿಂದೆ ಸರಿಯಿತು.

'ವಜೀರ' ಎಂದು ಸಿದ್ದಿಯರ ಗಾದಿಗಿದ್ದ ಬಿರುದನ್ನು 'ಯಾಕೂತಖಾನ' ಎಂದು ಔರಂಗಜೇಬ ಬದಲಾಯಿಸುತ್ತಾನೆ. ಈ ಎಲ್ಲ ರಾಜಕೀಯ ಹಿನ್ನೆಲೆಯಲ್ಲಿ ಔರಂಗಜೇಬನಿಗೆ ಸ್ವಾರ್ಥವೂ ಇತ್ತು. ಜಲಸೈನ್ಯವನ್ನು ಬಲಬಡಿಸಬೇಕೆಂದಿದ್ದ ಅವನ ಇಚ್ಛೆಗೆ-ಅನಾಯಾಸವಾದ ಅನುಕೂಲ ಒದಗಿಬರುತ್ತದೆ.

ಚಾಣಾಕ್ಷನಾದ ದೊರೆ ಔರಂಗಜೇಬನು ಈ ಮೂವರನ್ನು ಈ ದುರ್ಗದಿಂದ ಸ್ಥಳಾಂತರಿಸುತ್ತಾನೆ. ಸುರತದ ಬಳಿ ಮೂರು ಲಕ್ಷ ರೂಪಾಯಿಗಳ ಜಹಾಗೀರನ್ನು, ಕೆಲವು ಹಡಗುಗಳನ್ನು ನೀಡಿ ಅವರನ್ನು ಕಳುಹುತ್ತಾನೆ. ಅವರು ಇವನ ಅಧೀನದಲ್ಲಿಯೇ ಇರುತ್ತಾರೆ.


ಅಂತೂ, "ಜಂಜೀರ ಮುರೂಡ" ಶಿವಾಜಿಗೆ ಸಿಗಲಿಲ್ಲ.

ಮುಂದುವರೆದ ಯತ್ನ

ಈ ಕೋಟೆ ಶಿವಾಜಿಗೆ ಎಟುಕದಿದ್ದರೂ, ಅವನ ಮುಂದಿನವರಿಗೂ ಅದರ ದಾಹ ತಪ್ಪಲಿಲ್ಲ. ಸಂಭಾಜಿಯೂ ವಿಚಿತ್ರ ಪ್ರಯತ್ನ ಮಾಡಿದ್ದಾನೆ. ಇವನ ಯತ್ನ ರಾಮಾಯಣವನ್ನೇ ನೆನೆಯುವಂತಹದು. ರಾಮನು ಲಂಕೆಗೆ ಸೇತುವೆ ನಿರ್ಮಿಸಿದಂತೆ ರಾಜಾಪುರಿ ಪರ್ವತವನ್ನೆ ಬಗೆದು, ಸಮುದ್ರ ಹುಗಿದು, ಮುರೂಡಕ್ಕೆ ನೆಲಮಾರ್ಗ ನಿರ್ಮಿಸಲು ನಡೆಸಿದ ಪ್ರಯತ್ನ ವಿಚಿತ್ರವೆನಿಸುತ್ತದೆ.

ಈ ಕಾರ್ಯದ ಹೊಣೆಯನ್ನು ಸಂಭಾಜಿಯು ದಾದಾಜಿ ರಘುನಾಥ ಎಂಬ ಸರದಾರನಿಗೆ ಒಪ್ಪಿಸಿದ್ದನು. ಈ ಕಾರ್ಯ ಭರದಿಂದ ಸಾಗಿದ್ದನ್ನು ಕಂಡ ಕಿಲ್ಲೆದಲ್ಲಿಯ ಅಧಿಕಾರಿಗಳಿಗೆ ಭಯದ ಮೋಡಕವಿಯಿತು. ಈ ಸಲ ಪಾರಾಗುವುದು ಕಷ್ಟವೆಂದೆನಿತು. ಆದರೆ ಮೊಘಲರ ಸೈನ್ಯ ಮತ್ತೆ ನುಗ್ಗಿದ್ದರಿಂದ ಸಂಭಾಜಿ ಹಿಂದೆ ಸರಿಯಬೇಕಾಯಿತು (೧೬೮೨).

ಆಮೇಲೆ ಕ್ರಿ.ಶ. ೧೭೪೬ರಲ್ಲಿ ಪೇಶ್ವೆ ಹಾಗೂ



ಜಲದುರ್ಗದ ಮೂಲ ಮಹಾದ್ವಾರ

ಕಾನ್ಹೋಜಿ ಆಂಗ್ರೆಯವರೂ ಈ ಕೋಟೆಯನ್ನು ಕಬಳಿಸಲು ಪ್ರಯತ್ನಿಸಿದರು, ಅವರಿಗೂ ದೊರೆಯಲಿಲ್ಲ. ಕೊನೆಯದಾಗಿ ಪುಣೆಯ ನಾನಾಸಾಹೇಬ ಫಡಣವೀಸನು ಪ್ರಯತ್ನಿಸಿದರೂ ಈ ಕೋಟೆ ದೊರೆಯಲಿಲ್ಲ. ಕೋಟೆಯ ಸ್ಥಳದ ಪ್ರಭಾವವೊ, ಪರಾಕ್ರಮದ ಪ್ರಭಾವವೂ ಅಂತೂ ಮರಾಠರಿಗೆ ಈ ಕೋಟೆ ಕೊನೆಗೂ ಕೈವಶವಾಗಲಿಲ್ಲ.

೧೯೪೭ರಲ್ಲಿ ಭಾರತ ಸ್ವತಂತ್ರವಾಗುವ ವರೆಗೂ ಈ ಕೋಟೆ ಮುರೂಡ ಸಂಸ್ಥಾನಿಕರ ವಶದಲ್ಲಿಯೇ ಇತ್ತು. ಈಗ ಭಾರತದಲ್ಲಿ ಲೀನವಾಗಿದೆ.

ಇತಿಹಾಸದುದ್ದಕ್ಕೂ ಭದ್ರತೆಗೆ ಹೆಸರಾಗಿದ್ದ ಈ ಜಲದುರ್ಗ ಇಂದು ಒಂದು ಪ್ರೇಕ್ಷಣೀಯ ಆಕರ್ಷಕ ತಾಣವಾಗಿದೆ. ಕೋಟೆ ಕೊತ್ತಳಗಳ ಬಗ್ಗೆ ಆಸ್ಥೆಯಿದ್ದವರು ನೋಡಲೇಬೇಕಾದ ಸ್ಥಾನವಾಗಿದೆ.

✉ ೮೨, ಸಿಲ್ವರ್ ಟೌನ್, ಗೋಕುಲ ರೋಡ್
ಹುಬ್ಬಳ್ಳಿ-೫೮೦೦೩೦.